## ಅಪೂರ್ವ ಲೇಖನ ಮಾಲಿಕೆ

ಸಿಡ್ನಿ ಶ್ರೀನಿವಾಸ್ ಅವರು ವಿಶ್ವದ ಮಹಾವಿಜ್ಞಾನಿಗಳ ಮನೆಗಳಿಗೆ, ಅವರಿಗೆ ಸಂಬಂಧಿಸಿದ ಸ್ಥಳಗಳಿಗೆ ಭೇಟಿಕೊಟ್ಟ ಅನುಭವವನ್ನು ಹಂಚಿಕೊಳ್ಳುತ್ತಿರುವ 'ವಿಜ್ಞಾನಿಗಳ ಮಹಾಸನ್ನಿಧಿಯಲ್ಲಿ' ಲೇಖನ ಮಾಲಿಕೆ ಮೌಲ್ಯಯುತ ಹಾಗೂ ಉಪಯುಕ್ತವಾಗಿದೆ.

ವಿದ್ಯಾರ್ಥಿ ದೆಸೆಯಲ್ಲಿ ವಿಜ್ಞಾನಿಗಳ ಹೆಸರು ಮತ್ತು ಅವರ ಸಂಶೋಧನೆ ಬಗ್ಗೆ ಮಾತ್ರ ತಿಳಿದಿದ್ದೆ. ಈ ಮಾಲಿಕೆಯಲ್ಲಿ ಅವರ ಬದುಕು, ಅವರು ಬಾಳಿದ ಮನೆ, ಸ್ಥಳಗಳ ಬಗ್ಗೆ ವರ್ಣಚಿತ್ರಗಳ ಸಮೇತ ವಿವರವಾಗಿ ತಿಳಿಸುತ್ತಿರುವುದು ಅಪೂರ್ವ ಕೆಲಸ. ಲೇಖನ ಮಾಲಿಕೆ ಸಂಗ್ರಹಯೋಗ್ಯ.

– ಕೆ.ಎಸ್. ಪ್ರಭಾಕರ ಗುಪ್ತ, ಹಾಸನ

## ವಿಜ್ಞಾನಿಗಳ ನೆಲದಲ್ಲಿ ಕನ್ನಡ ಕಂಪು

'ಡೌನ್ ಹೌಸ್; ಡಾರ್ವಿನ್ ಮಹಾಶಯನ ಅಂಗಳ–ಹಿತ್ತಲಿನಲ್ಲಿ' (ಸೆ.14) ಲೇಖನ ಉಪಯುಕ್ತವಾಗಿದೆ. ಡಾರ್ವಿನ್ ಮನೆಯಲ್ಲಿ ಸ್ವತಃ ತಿರುಗಾಡಿದ ಅನುಭವವಾಯಿತು. ಕನ್ನಡದ ಕಂಪನ್ನು ಡಾರ್ವಿನ್ ಮನೆಯಲ್ಲಿ ಪಸರಿಸಿದ ಲೇಖಕರಿಗೆ ಅಭಿನಂದನೆಗಳು.

–ರಾಮಚಂದ್ರ ಎಂ.ಆರ್., ಬೆಂಗಳೂರು

## ಬರದ ಕುರಿತ ಸಾಕ್ಷ್ಯಚಿತ್ರ

'ಕೃಷಿ ಕರ್ನಾಟಕದ ಒಡಕಲು ಬಿಂಬಗಳು' (ಸೆ. 14, ಕೋಡಿಬೆಟ್ಟು ರಾಜಲಕ್ಷ್ಮಿ) ಮುಖಪುಟ ಲೇಖನ ಬರಗಾಲದ ಮುನ್ಸೂಚನೆ ಕುರಿತ ಗಂಭೀರ ಚಿತ್ರಣವನ್ನು ಕಟ್ಟಿ ಕೊಟ್ಟಿದೆ. ಈ ಲೇಖನವನ್ನು ಓದುತ್ತಿದ್ದರೆ ನನ್ನ ಬಾಲ್ಯ ಕಾಲದಲ್ಲಿ ಕಂಡ ಎರಡು ಭೀಕರ ಬರಗಾಲ ನೆನಪಾಗಿ ಒದ್ದಾಡುವಂತಾಯಿತು. ಎಂತೆಂಥ ಕಸದ ಗೆಡ್ಡೆಗಳನ್ನು ತಿಂದು ಬದುಕಬೇಕಾಗಿತ್ತು. ಕುಡಿಯುವ ನೀರಿಗೆ ಎಷ್ಟು ಪರದಾಟ. ಕೆರೆಯಲ್ಲಿ ಎಷ್ಟೊಂದು ಕಡೆ ಗುಂಡಿಗಳನ್ನು ತೋಡಿ ಅಲ್ಲಿ ಹೆಣ್ಣುಮಕ್ಕಳು ಸಾಲಾಗಿ ನಿಂತು ಚೆಂಬುಗಳನ್ನು ಹಳ್ಳದ ರೀತಿಯ ಬಾವಿಗಳಿಗೆ ಬಿಟ್ಟು ಕೆಸರಿನ ರೀತಿಯ ಬಗ್ಗಡ ನೀರನ್ನು ಪಡೆಯಬೇಕಾಗಿತ್ತು. ತಿಂಗಳಲ್ಲಿ ಒಮ್ಮೆಯೂ ಸ್ನಾನಕ್ಕೆ ತೊಂದರೆ. ಊರಿನ ಮಂದಿ ರಾತ್ರಿ ಸಮಯದಲ್ಲಿ ಹುಯ್ಯೋ ಹುಯ್ಯೋ ಮಳೆರಾಯ ಎಂದು ಕೂಗುತ್ತಾ ಮನೆಗಳ ಮುಂದೆ ಹೋಗಿ ನಿಲ್ಲುತ್ತಿದ್ದ ದೃಶ್ಯ ಎದುರಾಯಿತು.

ಲೇಖನ ಓದುತ್ತಿದ್ದರೆ ಬರಗಾಲ ಕುರಿತ ಸತ್ಯಜಿತ್ ರೇ ಅವರ ಬಂಗಾಳಿ ಚಲನಚಿತ್ರ 'ಆಶಾನಿ ಸಂಕೇತ್' ನೆನಪಾಯಿತು. ಬರದ ಕುರಿತಂತೆ ಲೇಖನ ಒಂದು ಸಾಕ್ಷ್ಯಚಿತ್ರದಂತೆ ಕಂಡಿತು.

–ಶೂದ್ರ ಶ್ರೀನಿವಾಸ್, ಬೆಂಗಳೂರು




## ವರ್ತಮಾನದ ಕೈಗನ್ನಡಿ

ಬರದ ಕುರಿತ ಲೇಖನ ರೈತರ ನೋವಿನ ಬೇರೆ ಬೇರೆ ಆಯಾಮಗಳನ್ನು ತೆರೆದಿಟ್ಟಿತು. ಮಳೆಗಾಗಿ ಪ್ರಾರ್ಥಿಸುವ, ಮಳೆಯನ್ನೇ ನಂಬಿ ಬದುಕುವ ರೈತ, ಮಳೆ ಬರದಿದ್ದಾಗಲೂ ಹಿಂಗಾರು ಮಳೆಯಾದರೂ ಬರಬಹುದು ಎಂದು ಆಶಾವಾದದಲ್ಲಿ ಬದುಕುವ ಪರಿ ಬೇಸರ ತರಿಸುತ್ತದೆ. ಸಮಕಾಲೀನ ಬರಹ, ಪ್ರಸ್ತುತ ಪರಿಸ್ಥಿತಿಗೆ ಹಿಡಿದ ಕೈಗನ್ನಡಿ.

–ಮಾರುತಿ ಗೋಪಿಕುಂಟೆ, ತುಮಕೂರು

## ಅರ್ಥಗರ್ಭಿತ ಕಥೆ

'ಮನುಷ್ಯ ಮತ್ತು ದೇವರು' (ಸೆ. 14, ಅನುವಾದ: ಡಿ.ಎನ್. ಶ್ರೀನಾಥ್) ಕಥೆ ಅರ್ಥಗರ್ಭಿತವಾಗಿದೆ. ಕೃಷ್ಣ ಪ್ರತ್ಯಕ್ಷನಾದ ಕಥೆ ಓದುತ್ತಿದ್ದರೆ ನಮ್ಮೊಳಗೊಬ್ಬ ದೇವರನ್ನು ಕಾಣಬಹುದು ಎಂಬಂತಿದೆ.



ನಿಜ ಜೀವನದಲ್ಲಿ ದೇವರೇ ಬಂದು ನನ್ನ ಸ್ಥಾನವನ್ನು ನೀ ತೆಗೆದುಕೋ ಎಂದಾಗ ಕಥೆಯಲ್ಲಿ ಕಾಣುವ ತಿರುವು ನಿಜಕ್ಕೂ ಒಂದು ಸಂದೇಶ ನೀಡಿದಂತಿದೆ.

–ರಮೇಶ ಗಬ್ಬೂರ್, ಗಂಗಾವತಿ

## ಎಂಥ ವಿಪರ್ಯಾಸ

ಕಥೆಯಲ್ಲಿ ಮನುಷ್ಯನ ನೈಜ ಸ್ವಾರ್ಥ ಎದ್ದು ಕಾಣುತ್ತದೆ. ಕಷ್ಟ ಕಾಲದಲ್ಲಿ ದೇವರಿಗೆ ಮೊರೆ ಹೋಗಿ ಸಹಾಯ ಬೇಡುವ ನಾವು, ದೇವರಿಗೆ ಸಹಾಯ ಮಾಡಲು ಹಿಂಜರಿಯುವುದು ಎಂತಹ ವಿಪರ್ಯಾಸ ಅಲ್ಲವೇ. ದೇವರಾಗುವುದು ಅಷ್ಟು ಸುಲಭವಲ್ಲ... ಕಥೆ ಬಹಳ ಹಿಡಿಸಿತು.

–ಲತಾ ಬಿ.ಎಸ್., ಬೆಂಗಳೂರು

## ದೇವರಿಗೂ ದುಃಖ!

ತ್ರಿಭಂಗಿ ಕೃಷ್ಣ ಮೂರು ಸಾವಿರ ವರ್ಷಗಳಿಂದ ನಿಂತು ಭಕ್ತರ ಕೋರಿಕೆಗಳನ್ನು ಈಡೇರಿಸುತ್ತ ವಿಶ್ರಾಂತಿ ಬಯಸಿ ತನ್ನ ಸ್ಥಾನವನ್ನು ಯಾರಾದರೂ ಭಕ್ತರು ಸ್ವೀಕರಿಸಿ ತನ್ನನ್ನು ವಿಮುಕ್ತಿಗೊಳಿಸುವರೆಂದು ಬಯಸಿದ. ಅದಕ್ಕಾಗಿ ಭಕ್ತರನ್ನುದ್ದೇಶಿಸಿ ತನ್ನ ಮನೋ ಇಂಗಿತ ತಿಳಿಸಿದ. ಆದರೆ ದೇವರಿಂದ ವರವನ್ನು ಪಡೆದ ಭಕ್ತರೇ ಇದನ್ನು ತಿರಸ್ಕರಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಆಗ ದಾರಿಕಾಣದ ಕೃಷ್ಣ ನಿರಾಶೆಗೊಳಗಾಗಿ ತಮ್ಮ ಮುಂಚಿನ ಸ್ಥಾನಕ್ಕೆ ಮರಳಿದ ಕಥೆ ಸಂದೇಶವೊಂದನ್ನು ಸ್ಫುರಿಸಿದೆ. ಮೇಲು ನೋಟಕ್ಕೆ ಸಣ್ಣ ನಗು ತಂದರೂ ವಿಷಾದವೂ ಆಗುತ್ತದೆ.

–ಎಂ.ಟಿ. ರಮಾನಂದ ರೆಡ್ಡಿ, ಚಿತ್ರದುರ್ಗ

## ಮನೋಹರ ಸತೋಪಂತ್

'ಸತೋಪಂತ್; ಹಿಮಶಿಖರಗಳ ನಡುವಿನ ನೀರ ತೊಟ್ಟಿಲು' (ಸೆ.14, ರವಿಶಂಕರ್ ಎಸ್.ಎಲ್.) ಪ್ರವಾಸ ಲೇಖನ ಸುಂದರವಾಗಿ ಮೂಡಿಬಂದಿದೆ. ದೇಶದ ಉತ್ತರದ ತುತ್ತತುದಿಯ ಈ ಪ್ರವಾಸಿ ತಾಣ ಮನೋಹರವಾಗಿದೆ. ಸತೋಪಂತ್ ಕುರಿತು ಲೇಖಕರು ನೀಡಿರುವ ಮಾಹಿತಿ ಮಹತ್ವಪೂರ್ಣವಾಗಿವೆ.

–ಮೋದೂರು ಮಹೇಶಾರಾಧ್ಯ, ಹುಣಸೂರು

## ಕೊಳ್ಳುಬಾಕತನವೂ ಅಡಗಿದೆ

'ಜೀವಪರ, ಮೌಲ್ಯಯುತ ಶಿಕ್ಷಣ ಮರೀಚಿಕೆಯೆ?' (ಸೆ.14, ರಘುನಾಥ ಚ.ಹ.) 'ನಿಮ್ಮೊಡನೆ' ಲೇಖನ ಸಕಾಲಿಕವಾಗಿದೆ. ಮಹತ್ವಾಕಾಂಕ್ಷಿ ವಿದ್ಯಾರ್ಥಿಗಳ ಪಾಲಿಗೆ, ನಾಯಿಕೊಡೆಯಂತೆ ತಲೆ ಎತ್ತುತ್ತಿರುವ ಕೋಚಿಂಗ್ ಫ್ಯಾಕ್ಟರಿಗಳು ಜೀವಮಾರಕಗಳಾಗಿ ಪರಿಣಮಿಸುತ್ತಿರುವುದರ ಜತೆಗೆ, ತರುಣರ ಪಾಲಿಗೆ ಉದ್ಯೋಗ ಮರೀಚಿಕೆಯಾಗುತ್ತಿರುವುದರ ಹಿಂದೆ ಕೊಳ್ಳುಬಾಕತನದ ತುರ್ತು ರಾಜಕೀಯದ ಕುಮ್ಮಕ್ಕೂ ಇದೆ. ಈ ಕುರಿತ ಚಿಂತನೆ, ಸಕಾಲಿಕವಾಗಿದೆ. ಈಗ ಕಣ್ಣೆರೆಯುತ್ತಿರುವ ಪಾಳಿ ಪಾಲಕ– ವಿದ್ಯಾರ್ಥಿಗಳದ್ದೇ ಆಗಿದೆ.

–ಸರ್ವಜಿತ, ಹುಬ್ಬಳ್ಳಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in